HJ-

ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\7606\2015\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:08/08/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಸಿ.ಹೆಚ್.ಗೌರ್, ನಂ.19, ನೆಲ ಮಹಡಿ, ಸ್ಯಾಟಿಲೈಟ್ ಸಂಕೀರ್ಣ, ಕೊಪ್ಪಿಕರ ಮುಖ್ಯ ರಸ್ತೆ, ಹುಬ್ಬಳ್ಳಿ, ಧಾರವಾಡ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಧಾರವಾಡ ಜಿಲ್ಲೆ ಹುಬ್ಬಳ್ಳಿ ಕೊಪ್ಪಿಕರ ಮುಖ್ಯ ರಸ್ತೆ ಸ್ಯಾಟಿಲೈಟ್ ಸಂಕೀರ್ಣ ನೆಲ ಮಹಡಿ ನಂ.19ರ ಶ್ರೀ.ಸಿ.ಹೆಚ್.ಗೌರ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಧಾರವಾಡ ಜಿಲ್ಲೆ ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆ ಜೆ-ಶಾಖೆಯ ಸಹಾಯಕ ಆಯುಕ್ತರಾದ ಶ್ರೀ.ಜೆ.ಗಾಳೆಮ್ಮನವರ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಎದುರುದಾರರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಯಾದ ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ಎಂಬುವವರ ಜೊತೆ ಹೊಂದಾಣಿಕೆ ಮಾಡಿಕೊಂಡು ಅವರ ಮಗ ಶ್ರೀ.ಶ್ರೀನಿವಾಸ ಕ್ಯಾರೇಕಟ್ಟಿ ರವರಿಗೆ ಗಣಕಯಂತ್ರ ಆಪರೇಟರ್ ಕಾರ್ಮಿಕರ ಗುತ್ತಿಗೆಯನ್ನು ದಿನಗೂಲಿ ಆಧಾರದ ಮೇಲೆ 11 ತಿಂಗಳುಗಳ ಅವಧಿಗೆ ನೀಡಿದ್ದು, ಪ್ರಸ್ತುತ 10 ವರ್ಷಗಳಾದರೂ ಸಹ ಸದರಿ ಗುತ್ತಿಗೆಯನ್ನು ಮುಂದುವರೆಸಿದ್ದಾರೆ. ಸದರಿಯವರು ಯಾವ ಕಾರ್ಮಿಕರ ಹೆಸರಿನಲ್ಲಿ? ಭವಿಷ್ಯ ನಿಧಿ ಖಾತೆಯಲ್ಲಿ ಹಣ ತುಂಬಿದ್ದಾರೆ ಎಂಬುದು ಸಹ ಸ್ಪಷ್ಟವಾಗಿಲ್ಲ ಅಲ್ಲದೇ, ಕಾರ್ಮಿಕರ ಪರವಾನಗಿಯನ್ನು ಕಳೆದ 10 ವರ್ಷಗಳಿಂದ ಪಡೆದಿಲ್ಲ. ಇದರಲ್ಲಿ ಸುಮಾರು ಕೋಟ್ಯಾಂತರ ರೂಪಾಯಿ ಸಾರ್ವಜನಿಕರ ಹಣ ದುರುಪಯೋಗವಾಗಿದೆಯೆಂದು ಹೇಳಿದ್ದಾರೆ.

N. Anand

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:23/06/12 ರಿಂದ 16/04/15ರವರೆಗೆ ಸಹಾಯಕ ಆಯುಕ್ತರಾಗಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ:27/07/08ರಂದು ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳ ಕಾರ್ಯಕಲಾಪಗಳು ದಿನಾಂಕ:14/12/07ರ ಠರಾವು ನಂ.227ರ ಮಂಜೂರಿಯಂತೆ ಹಿಂದಿನ ಸಹಾಯಕ ಆಯುಕ್ತರು ಟೆಂಡರ್ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ನಂತರ ಸದರಿ ಟೆಂಡರನ್ನು ಅಂಗೀಕರಿಸಲು ರಚಿಸಿದ ಸಮಿತಿ ದಿನಾಂಕ:27/02/08ರಂದು ಸಭೆ ಜರುಗಿಸಿ, ಮೆ॥ಇನ್ಫೋಟೆಕ್ ಕಂಪ್ಯೂಟರ್ ಎಜುಕೇಷನ್, ಹುಬ್ಬಳ್ಳಿ ರವರಿಗೆ ಅಂಗೀಕರಿಸಿ, ಶಿಫಾರಸ್ಸು ಮಾಡಲು ತೀರ್ಮಾನಿಸಿದ್ದು, ಸದರಿ ಶಿಫಾರಸ್ಸನ್ನು ಆಯುಕ್ತರ ಅನುಮೋದನೆಯೊಂದಿಗೆ ಜಂಟಿ ಆಯುಕ್ತರು ಕಾರ್ಯಾದೇಶ ನೀಡಿದ್ದಾರೆ. ಸದರಿ ಕಾರ್ಯಾವಧಿ ಮುಗಿದ ನಂತರ ಮುಂದಿನ ಒಂದು ವರ್ಷದವರೆಗೆ ಅವಧಿ ವಿಸ್ತರಿಸಬೇಕೆಂದು ಸದರಿ ಸಂಸ್ಥೆಯವರು ದಿ:07/07/09ರಂದು ಪತ್ರದ ಮೂಲಕ ಕೋರಿದ್ದು, ಅದರಂತೆ ಆಯುಕ್ತರು ದಿ:03/08/09ರಂದು ಅವಧಿ ವಿಸ್ತರಿಸಿದ್ದಾರೆ. ಆ ನಂತರ, ದಿ:20/01/2010ರಂದು ಮನಃ ದಿನಪತ್ರಿಕೆಯಲ್ಲಿ ಟೆಂಡರ್ ಕರೆದು ಠರಾವು ಸಂಖ್ಯೆ:188 ದಿ:21/04/10ರಂತೆ ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ದಿ:01/09/10 ರಿಂದ 31/08/11ರವರೆಗೆ ಕಾರ್ಯಾದೇಶ ನೀಡಿದೆ. ಸದರಿ ಟೆಂಡರನ್ನು ದಿ:01/09/11 ರಿಂದ ಸಹಾಯಕ ಆಯುಕ್ತರ ಪತ್ರದಂತೆ ದಿ:10/08/11ರವರೆಗೆ ಮುಂದುವರೆಸಿದೆ. ಆದರೆ, ಸದರಿ ಅವಧಿ ಮುಕ್ತಾಯವಾದ ನಂತರ, ಹೊಸದಾಗಿ ಟೆಂಡರ್ ಕರೆಯುವ ಬಗ್ಗೆ ಮಾನ್ಯ ಆಯುಕ್ತರ ಟಿಪ್ಪಣಿ ದಿ:15/09/12ರನ್ವಯ ಮಹಾನಗರ ಪಾಲಿಕೆಯ ಠರಾವು ಸಂ:1050 ದಿ:17/09/12ರನ್ವಯ ಹೊಸ ಟೆಂಡರ್ ಕರೆಯಲು ನಿರ್ಣಯಿಸಿದ್ದು, ಅದನ್ನು ಪ್ರಶ್ನಿಸಿ ಗುತ್ತಿಗೆದಾರರಾದ ಮೆ॥ಇನ್ಫೋಟೆಕ್ ಕಂಪ್ಯೂಟರ್ ಎಜುಕೇಷನ್, ಹುಬ್ಬಳ್ಳಿ ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ರವರಲ್ಲಿ ರಿಟ್ ಅರ್ಜಿ ಸಂ:75748/2012ರಂತೆ ಸಲ್ಲಿಸಿ, ತಡೆಯಾಜ್ಞೆ ತಂದಿದ್ದಾರೆ. ಈ ಬಗ್ಗೆ ತಕರಾರನ್ನು ಸಹ ಸಲ್ಲಿಸಿದೆ. ದೂರುದಾರರು ಮಾಹಿತಿ ಹಕ್ಕು ಕಾಯಿದೆ ಅಡಿ ಕೇಳಲಾದ ದಾಖಲೆಗಳನ್ನು ನೀಡಲಾಗಿದ್ದರೂ ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

481

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರ ಪಾಲಿಕೆ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ –

...........................

ಧಾರವಾಡ ಕೆರೆ ನಿರ್ವಹಣೆಗೆ ಸಂಬಂಧಪಟ್ಟಂತೆ ಗುತ್ತಿಗೆಯನ್ನು ಮೆ॥ಇನ್ಪೋಟೆಕ್ ಕಂಪ್ಯೂಟರ್ ಎಜುಕೇಷನ್, ಹುಬ್ಬಳ್ಳಿ ರವರಿಗೆ ನೀಡಿಲ್ಲ. ಹುಬ್ಬಳ್ಳಿಯ ಈಜುಕೊಳ ನಿರ್ವಹಣೆ, ವಲಯ ಕಛೇರಿ–5ಕ್ಕೆ ಸಂಬಂಧಪಟ್ಟಂತೆ, ಸಿಬ್ಬಂಧಿಯ ಅವಶ್ಯಕತೆ ಇದ್ದುದ್ದರಿಂದ ಕೊಟೇಷನ್ ದರಗಳನ್ನು ಕರೆದು ಕಡಿಮೆ ದರಕ್ಕೆ ಮಾನವ ಸಂಪನ್ಮೂಲ ಪೂರೈಸಲು ಮೆ॥ಇನ್ಪೋಟೆಕ್ ರವರು ಒಪ್ಪಿದ್ದ ಕಾರಣ, ಕಾರ್ಯಾದೇಶ ನೀಡಲಾಗಿದೆ. ಗಣಕಯಂತ್ರ ಆಪರೇಟರ್, ಮಾನವ ಸಂಪನ್ಮೂಲಕ್ಕೆ ಸಂಬಂಧಪಟ್ಟಂತೆ ಹೊರ ಗುತ್ತಿಗೆ ಆಧಾರದ ಮೇಲೆ ಬೇರೆಯವರಿಗೆ ನೀಡಲಾಗಿದೆ. ಅಧೀಕ್ಷಕ ಇಂಜಿನಿಯರ್‌ರವರ ಕಛೇರಿರವರಿಗೆ ಶ್ರೀ.ಶ್ರೀನಿವಾಸ ಕ್ಯಾರೇಕಟ್ಟಿ ಎಂಬುವವರು ಪರವಾನಗಿ ಪಡೆದಿಲ್ಲ. ಪಾಲಿಕೆಯ ಠರಾವು ಸಂ:190ರಂತೆ ದಿ:03/11/07ರನ್ವಯ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಪೂರೈಸಲು ಅಲ್ಪಾವಧಿ ಟೆಂಡರ್ ಕರೆದಿದ್ದು, ಮೆ॥ಇನ್ಪೋಟೆಕ್ ಕಂಪ್ಯೂಟರ್ ಎಜುಕೇಷನ್, ಹುಬ್ಬಳ್ಳಿ ರವರಿಗೆ ದಿ:26/12/07 ರಿಂದ 25/12/08ರವರೆಗೆ ನೀಡಲಾಗಿದ್ದು, ನಂತರ ದಿ:12/06/09 ರಿಂದ 11/06/10 ರವರೆಗೆ ಮಾನವ ಸಂಪನ್ಮೂಲವನ್ನು ಪೂರೈಸಲು ಆದೇಶ ನೀಡಿದೆ. ದಿ:06/08/11 ಹಾಗೂ 07/10/11 ರಿಂದ 16/10/12ರವರೆಗೆ ಮಾನವ ಸಂಪನ್ಮೂಲವನ್ನು ಪೂರೈಸಲು ಕಾರ್ಯಾದೇಶ ನೀಡಿದೆ. ನಂತರ ದಿ:17/10/12 ರಿಂದ 3 ವರ್ಷಗಳವರೆಗೆ ಮುಂದುವರೆಸಲು ಆದೇಶಿಸಿದೆ. ಆ ನಂತರ, ಮಾನವ ಸಂಪನ್ಮೂಲವನ್ನು ಪೂರೈಸಲು ವ್ಯವಸ್ಥಾಪಕರು, ಕಿಯೋನಿಕ್ಸ್, ಶಾಂತಿನಗರ ರವರು ದಿ:01/01/16 ರಿಂದ 31/12/16ರವರೆಗೆ ಕೆಲಸ ಪೂರೈಸಲು ಆದೇಶಿಸಿದೆ. ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಲಯ ರವರ ವರದಿಯಂತೆ ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರ ಮಗನಾದ ಶ್ರೀ.ಸುನೀಲ್ ಕ್ಯಾರೇಕಟ್ಟೆ ರವರು ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗದಿಂದ ದಿ:07/11/12 ರಿಂದ ಇಲ್ಲಿಯವರೆಗೆ ಒಟ್ಟು 9 ಟೆಂಡರ್‌ಗಳಿಗೆ ಭಾಗವಹಿಸಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರು ಸದರಿ ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಯಾಗಿದ್ದಾರೆ. ಶ್ರೀ.ಶ್ರೀನಿವಾಸ ಕ್ಯಾರೇಕಟ್ಟಿ ಮತ್ತು ಶ್ರೀ.ಸುನೀಲ್ ಕ್ಯಾರೇಕಟ್ಟಿ ರವರು

N. Ananda

ಸದರಿಯವರ ಮಕ್ಕಳಾಗಿದ್ದಾರೆ. ಸದರಿ ಮಾಹನಗರ ಪಾಲಿಕೆಯ ವ್ಯಾಪ್ತಿಗೆ ಸಂಬಂಧಪಟ್ಟಂತೆ, ಕೆಲವೊಂದು ಕಾಮಗಾರಿಗಳಿಗೆ ಮಾನವ ಸಂಪನ್ಮೂಲದ ಅವಶ್ಯಕತೆ ಇದ್ದು, ಈ ಬಗ್ಗೆ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳ ಕಾರ್ಯಕಲಾಪಗಳು ದಿ:14/12/07ರ ಠರಾವು ಸಂ:222ರಂತೆ ಟೆಂಡರ್ ಕರೆದಿದ್ದು, ಸದರಿ ಟೆಂಡರನ್ನು ದಿನಪತ್ರಿಕೆಗಳಲ್ಲಿ ಪ್ರಚಾರ ಪಡಿಸಿದ್ದು, ದಿನಾಂಕ:22/07/08ರಂದು ನಡೆದ ಸಭೆಯಲ್ಲಿ ಮೆ॥ಇನ್ಫೋಟೆಕ್ ಕಂಪ್ಯೂಟರ್ ಎಜುಕೇಷನ್, ಹುಬ್ಬಳ್ಳಿ ರವರಿಗೆ ಅಂಗೀಕರಿಸಿ ಶಿಫಾರಸ್ಸು ಮಾಡಿರುವುದು ಕಂಡು ಬಂದಿದೆ. ಅದರಂತೆ, ದಿ:07/08/08ರಂದು ಕಾರ್ಯಾದೇಶ ನೀಡಿದೆ. ಸದರಿ ಕಾಲಾವಧಿ ಮುಗಿದ ನಂತರ ದಿ:07/07/09 ರಿಂದ 2012ರವರೆಗೂ ಸಹ ಕಾನೂನುಬಾಹಿರವಾಗಿ ಟೆಂಡರ್ ಅವಧಿಯನ್ನು ವಿಸ್ತರಿಸಿರುವುದು ಕಂಡು ಬಂದಿದೆ. ಆ ನಂತರ, ಸದರಿ ಟೆಂಡರ್‌ಗೆ ಸಂಬಂಧಪಟ್ಟಂತೆ, ಹೊಸದಾಗಿ ಟೆಂಡರ್ ಕರೆದಿದ್ದು, ಸದರಿ ಟೆಂಡರಿನಲ್ಲಿ ವ್ಯವಸ್ಥಾಪಕರು, ಕಿಯೋನಿಕ್ಸ್, ಶಾಂತಿನಗರ ರವರಿಗೆ ನೀಡಿದ್ದು, ಸದರಿಯವರಿಗೆ ದಿ:01/01/16 ರಿಂದ 31/12/06ರವರೆಗೆ ಕಾರ್ಯಾದೇಶ ನೀಡಿದ್ದಾರೆ. ಅಲ್ಲದೇ, ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರ ಮಗನಾದ ಶ್ರೀ.ಸುನೀಲ್ ಕ್ಯಾರೇಕಟ್ಟಿ ರವರು ಕಾರ್ಯನಿರ್ವಾಹಕ ಅಭಿಯಂತರರು, ದಕ್ಷಿಣ ವಿಭಾಗದಿಂದ ಒಟ್ಟು 9 ಟೆಂಡರ್‌ಗಳಲ್ಲಿ ಭಾಗವಹಿಸಿರುವುದು ಕಂಡು ಬಂದಿದೆ. ಕರ್ನಾಟಕ ಮುನ್ಸಿಪಲ್ ಕಾಯಿದೆ, ಕಲಂ 77ರನ್ವಯ ಯಾವುದೇ ಚುನಾಯಿತ ಪ್ರತಿನಿಧಿ ಸರ್ಕಾರದ ಗುತ್ತಿಗೆಗಳಲ್ಲಿ ಅಥವಾ ಇತರ ವ್ಯವಹಾರಗಳಲ್ಲಿ ಭಾಗವಹಿಸುವಂತಿಲ್ಲವೆಂದು ಪರಿಭಾಷಿಸಿದೆ. ಆದರೆ, ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರು ಸದರಿ ಟೆಂಡರಿನಲ್ಲಿ ಭಾಗವಹಿಸಿ, ತಮ್ಮ ಮಕ್ಕಳ ಹೆಸರಿಗೆ ಟೆಂಡರ್ ಗುತ್ತಿಗೆ ಕೊಡಿಸಿರುವುದು ಕಂಡು ಬಂದಿದೆ. ಕರ್ನಾಟಕ ಮುನ್ಸಿಪಲ್ ಕಾಯಿದೆ, ಕಲಂ 78 ಮತ್ತು 79ರನ್ವಯ ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರು ಸಾರ್ವಜನಿಕ ನೌಕರರಾಗಿದ್ದು, ಸದರಿ ವ್ಯವಹಾರಗಳಲ್ಲಿ ಭಾಗವಹಿಸಿರುವುದರಿಂದ, ತಪ್ಪಿತಸ್ಥರಾಗಿದ್ದಾರೆ. ಎದುರುದಾರರು ಸದರಿ ಮಹಾನಗರ ಪಾಲಿಕೆಯ ಸಹಾಯಕ ಆಯುಕ್ತರಾಗಿದ್ದು, ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರು ಸಾರ್ವಜನಿಕ ನೌಕರರಾಗಿರುವ ವಿಚಾರ ಗೊತ್ತಿದ್ದರೂ ಸಹ ಸದರಿಯವರ ಮಕ್ಕಳ ಹೆಸರಿಗೆ ಗುತ್ತಿಗೆ ನೀಡಿರುವುದು ಕಂಡು ಬಂದಿದೆ. ಅಲ್ಲದೇ, ಎದುರುದಾರರು ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರ ಮಗನಾದ ಶ್ರೀ.ಶ್ರೀನಿವಾಸ ಕ್ಯಾರೇಕಟ್ಟಿ ರವರಿಗೆ ಒಟ್ಟು 10 ವರ್ಷಗಳ ಕಾಲ ಅನಧಿಕೃತವಾಗಿ ಗುತ್ತಿಗೆ ನೀಡಿರುವುದು ಮತ್ತು ಶ್ರೀ.ಪ್ರಕಾಶ್ ಕ್ಯಾರೇಕಟ್ಟಿ ರವರ ಮತ್ತೊಬ್ಬ ಮಗನಾದ ಶ್ರೀ.ಸುನೀಲ್ ಕ್ಯಾರೇಕಟ್ಟಿ ರವರಿಗೆ 9 ಕಾಮಗಾರಿಗಳನ್ನು ನೀಡಿರುವುದು ಕಂಡು ಬಂದಿದೆ. ಎದುರುದಾರರು ಕರ್ನಾಟಕ ಮುನ್ಸಿಪಲ್ ಕಾಯಿದೆ, ಕಲಂ 77 ರಿಂದ 79ರಲ್ಲಿನ ಕಾನೂನಿನ ಅಂಶಗಳ ಬಗ್ಗೆ ತಿಳುವಳಿಕೆಯಿದ್ದರೂ ಸಹ ಅವುಗಳನ್ನು ಉಲ್ಲಂಘಿಸಿ, ಕೆಲಸದ ಟೆಂಡರ್ ನೀಡಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

N. Anand[signature]

469

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಆದ್ದರಿಂದ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಹಾಲೀ ಸದಸ್ಯರಾದ ಶ್ರೀ.ಪ್ರಕಾಶ್ ಕ್ಯಾದೀಕಟ್ಟೆ ರವರ ಸದಸ್ಯತ್ವವನ್ನು ರದ್ದುಪಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಕೇಳಿದೆ.

N. Anand 8/8

(ನ್ಯಾಯಮೂರ್ತಿ ಎನ್ ಆನಂದ)

ಉಪಲೋಕಾಯುಕ್ತ-1,

ಕರ್ನಾಟಕ ರಾಜ್ಯ.